ತೊಂದರೆ ಆಗುತ್ತಿದೆ. ಸರ್ಕಾರ ಆದಷ್ಟು ಬೇಗ ಇದರ ಕಡೆ ಗಮನ ಹರಿಸಬೇಕೆಂದು ಹೇಳಿ ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಸಿ.ಪಾಟೀಲ್: ಮಾನ್ಯ ಅಧ್ಯಕ್ಷರೆ, ಅಂಗನವಾಡಿ ಕಟ್ಟಡಗಳ ಕೊರತೆ ಇದ್ದದ್ದು ನಿಜ. ಆದರೆ ಈ ಬಾರಿ ರಾಜ್ಯದ ಇತಿಹಾಸದಲ್ಲಿ ಪ್ರಥಮ ಬಾರಿಗೆ ನಮ್ಮ ಮುಖ್ಯ ಮಂತ್ರಿಗಳು ಹಳೆಯ ಕಟ್ಟಡಗಳು, ಅಪೂರ್ಣವಾದ ಕಟ್ಟಡಗಳು, ಜಿಲ್ಲಾ ಪಂಚಾಯತಿಯ link document ನಿಂದ ಬರಬೇಕಾದ ಹಣದಿಂದ ಏನು ನಿಂತಿದ್ದವು, ರಿಪೇರಿ ಮತ್ತು ಮೆಂಟೇನೆನ್ಸ್‌ಗಾಗಿ ರೂ. 100 ಕೋಟಿಗಳನ್ನು ಈ ಆಯವ್ಯಯದಲ್ಲಿ ಇಟ್ಟಿದ್ದಾರೆ. ಅದರಲ್ಲಿ ತಮಗೆ ಹೊಸ ಕಟ್ಟಡಗಳು ಬರುತ್ತವೆ ಎನ್ನುವ ಮಾತನ್ನು ಹೇಳುತ್ತಾ, ಈ ವರ್ಷ ರಾಜ್ಯದಲ್ಲಿ 42 ಕೋಟಿ ರೂ.ಗಳನ್ನು ಮತ್ತು ಆರ್.ಐ.ಡಿ.ಎಫ್‌ನಲ್ಲಿ 80 ಕೋಟಿ ರೂ.ಗಳನ್ನು ಒಟ್ಟು 122 ಕೋಟಿ ರೂ.ಗಳನ್ನು ಹೊಸ ಅಂಗನವಾಡಿ ಕಟ್ಟಡಗಳಿಗೆ ನಮ್ಮ ಸರ್ಕಾರ ಮೀಸಲಿಟ್ಟಿದೆ. ಅದರಲ್ಲಿ ಈ ಬಾರಿ ಅಂಗನವಾಡಿ ಕಟ್ಟಡಗಳ ಪ್ರಗತಿ ದೊರೆಯುತ್ತದೆ ಎನ್ನುವ ಆಶ್ವಾಸನೆಯನ್ನು ಗೌರವಾನ್ವಿತ ಸದಸ್ಯರಿಗೆ ಹೇಳುತ್ತೇನೆ. ವಿಶೇಷವಾಗಿ ಮಾನ್ಯ ಬಾಲಕೃಷ್ಣರವರ ಕ್ಷೇತ್ರ ಡಾ: ನಂಜುಂಡಪ್ಪ ಆಯೋಗದ ವರದಿಯಲ್ಲಿ ಬರುತ್ತಿರುವ ಹಿನ್ನಲೆಯಲ್ಲಿ ನಿಮಗೆ ಸಾಧ್ಯವಾದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಅಂಗನವಾಡಿಗಳನ್ನು ಕೊಡಿಸುವಂಥ ಪ್ರಯತ್ನವನ್ನು ನಾನು ಮಾಡುತ್ತೇನೆ. ಅಂಗನವಾಡಿ ಕಟ್ಟಡದ ಜೊತೆಗೆ ಮಹಿಳೆಯರಿಗೆ ಕೊಡುವ ಸೀರೆ ಕಾರ್ಯಕ್ರಮವನ್ನು ಮುಂದುವರೆಸುತ್ತೇವೆ. ಅದರ ಬಗ್ಗೆ ತಮ್ಮ ಅಸಹಾಕಾರ ಬೇಡ ಸಹಕಾರ ಬೇಕು ಎಂದು ಕೇಳುತ್ತೇನೆ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮೊದಲು ಕಟ್ಟಡಗಳ ಕಾರ್ಯಕ್ರಮ ಮುಗಿಸಿ ನಂತರ ಅದನ್ನು ತೆಗೆದುಕೊಳ್ಳಿ.

ಶ್ರೀ ಸಿ.ಸಿ. ಪಾಟೀಲ್: ಖಂಡಿತವಾಗಿ ಬೇಗ ಕ್ರಮ ತೆಗೆದುಕೊಳ್ಳುತ್ತೇನೆ.

ಬಿಪಿಎಲ್, ಎಪಿಎಲ್ ಫಲಾನುಭವಿಗಳು

593 ಶ್ರೀ ಮಹದೇವ ಪ್ರಸಾದ ಹೆಚ್.ಎನ್. (ಗುಂಡ್ಲುಪೇಟೆ): ಮಾನ್ಯ ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಿಪಿಎಲ್ ಹಾಗೂ ಎಪಿಎಲ್ ಎಷ್ಟು ಫಲಾನುಭವಿಗಳನ್ನು ಗುರುತಿಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಬಿಪಿಎಲ್ ಕುಟುಂಬಗಳ ಪೈಕಿ ಎಷ್ಟು ಕುಟುಂಬಕ್ಕೆ ಗಣಕೀಕೃತ ಶಾಶ್ವತ ಪಡಿತರ ಚೀಟಿ ನೀಡಲಾಗಿದೆ ; ಇನ್ನು ಎಷ್ಟು ಕುಟುಂಬಗಳಿಗೆ ಗಣಕೀಕೃತ ಪಡಿತರ ಚೀಟಿ ನೀಡುವುದು ಬಾಕಿ ಇದೆ ; (ಈ ಮಾಹಿತಿಯನ್ನು ತಾಲ್ಲೂಕುವಾರು ಒದಗಿಸುವುದು)

ಇ) ಅರ್ಹ ಬಿಪಿಎಲ್ ಫಲಾನುಭವಿಗಳು ಬಿಪಿಎಲ್ ಪಡಿತರ ಚೀಟಿಯಿಂದ ವಂಚಿತರಾಗಿದು, ಆ ಪೈಕಿ ಎಷ್ಟು ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಕೋರಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಿವೆ. ಇವರಿಗೆ ಬಿಪಿಎಲ್ ಪಡಿತರ ಚೀಟಿ ನೀಡಲು ತೆಗೆದುಕೊಂಡಿರುವ ಕ್ರಮಗಳೇನು ; (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ?

ಕು॥ ಶೋಭಾ ಕರಂದ್ಲಾಜೆ (ಇಂಧನ ಹಾಗೂ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 98,41,649 ಬಿಪಿಎಲ್ ಫಲಾನುಭವಿಗಳನ್ನು (ಎಎವೈ ಫಲಾನುಭವಿಗಳು ಸೇರಿದಂತೆ) ಹಾಗೂ 52,97,772 ಎಪಿಎಲ್ ಫಲಾನುಭವಿಗಳನ್ನು ಗುರುತಿಸಲಾಗಿದೆ. (ತಾಲ್ಲೂಕುವಾರು ಬಿಪಿಎಲ್ ಅನುಬಂಧ-1 ಹಾಗೂ ಜಿಲ್ಲಾವಾರು ಎಪಿಎಲ್ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ)

ಆ) ಈವರೆಗೆ ನೀಡಿದ ಎಲ್ಲಾ ಪಡಿತರ ಚೀಟಿಗಳ ಮಾಹಿತಿಗಳನ್ನು ಗಣಕೀಕೃತಗೊಳಿಸಲಾಗಿದೆ. ಆದರೆ ಶಾಶ್ವತ ಪಡಿತರ ಚೀಟಿಗಳಲ್ಲಿ ಭಾವಚಿತ್ರಗಳನ್ನು ಮುದ್ರಿಸಿ ಲ್ಯಾಮಿನೇಟ್ ಮಾಡಲಾಗಿದ್ದು ಮತ್ತು ತಾತ್ಕಾಲಿಕ ಪಡಿತರ ಚೀಟಿಗಳಲ್ಲಿ ಭಾವಚಿತ್ರವಿರುವುದಿಲ್ಲ ಹಾಗೂ ಲ್ಯಾಮಿನೇಟ್ ಮಾಡಿರುವುದಿಲ್ಲ. 23,19,259 ತಾತ್ಕಾಲಿಕ ಪಡಿತರ ಚೀಟಿಯ ಬದಲು ಲ್ಯಾಮಿನೇಟ್ ಮಾಡಿದ ಪಡಿತರ ಚೀಟಿಗಳನ್ನು ನೀಡಬೇಕಾಗುತ್ತದೆ. ಜಿಲ್ಲಾವಾರು ಮಾಹಿತಿ ಅನುಬಂಧ-3ರಲ್ಲಿ ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ. ಆದರೆ ರಾಜ್ಯದಲ್ಲಿ ಬಹಳ ಸಂಖ್ಯೆಯಲ್ಲಿ ಅನರ್ಹ ಪಡಿತರ ಚೀಟಿಗಳು ಉಪಯೋಗದಲ್ಲಿದ್ದು ಅವುಗಳನ್ನು ಗುರುತಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಅನರ್ಹ ಪಡಿತರ ಚೀಟಿಗಳನ್ನು ಗುರುತಿಸಿದ ನಂತರ, ತಾತ್ಕಾಲಿಕ ಪಡಿತರ ಚೀಟಿಗಳ ಪೈಕಿ ಅರ್ಹ ಪಡಿತರ ಚೀಟಿಗಳು ಇದ್ದರೆ ಅವುಗಳಿಗೆ ಶಾಶ್ವತ ಪಡಿತರ ಚೀಟಿಗಳನ್ನು ನೀಡಲಾಗುವುದು.

ಇ) ತಾಲ್ಲೂಕುವಾರು ಬಿಪಿಎಲ್ ಪಡಿತರ ಚೀಟಿ ಕೋರಿ ಬಂದಿರುವ ಮಾಹತಿ ಸದ್ಯಕ್ಕೆ ಲಭ್ಯವಿರುವುದಿಲ್ಲ. ಅಸಂಖ್ಯಾತ ಅನರ್ಹ ಪಡಿತರ ಚೀಟಿಗಳು

ಉಪಯೋಗದಲ್ಲಿ ಇರುವುದರಿಂದ ಅನರ್ಹ ಪಡಿತರ ಚೀಟಿಗಳನ್ನು ಹಾಗೂ ಪಡಿತರ ಚೀಟಿ ಇಲ್ಲದೆ ಇರುವ ಕುಟುಂಬಗಳನ್ನು ಗುರುತಿಸುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಸದರಿ ಪ್ರಕ್ರಿಯೆ ಮುಗಿದ ಕೂಡಲೇ ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗುವುದು.

ANNEXURE-II TO LAQ 593

Districtwise APL Ration Card Statement

Sl. No.	Name of the District	APL Cards
1.	2	3
1	Bagalkot	176882
2	Bangalore IRA	832660
3	Bangalore Rural	68253
4	Bangalore Urban	196048
5	Belgaum	580742
6	Bellary	177595
7	Bidar	189680
8	Bijapur	172745
9	Chamarajanagar	72296
10	Chickballapura	87431
11	Chikkamagalur	82939
12	Chitradurga	88639
13	D. Kannada	205400
14	Davanagere	138551
15	Dharwad	149896
16	Gadag	93391
17	Gulbarga	296979

1.	2	3
18	Hassan	125825
19	Haveri	100387
20	Kodagu	63103
21	Kolar	106824
22	Koppal	95100
23	Mandya	178699
24	Mysore	174629
25	Raichur	153096
26	Ramanagar	90368
27	Shimoga	151757
28	Tumkur	194832
29	Udupi	120341
30	Uttara Kannada	132684
	GRAND TOTAL	**5297772**

ANNEXURE-III TO LAQ 593

Districtwise Temporary Ration Card Statement

Sl. No.	Name of the District	Temporary Ration Cards
1.	2	3
1	Bagalkot	74034
2	Bangalore IRA	0
3	Bangalore Rural	63272
4	Bangalore Urban	109439
5	Belgaum	149871

1.	2	3
6	Bellary	110509
7	Bidar	88370
8	Bijapur	129234
9	Chamarajanagar	49499
10	Chickballapura	60838
11	Chikkamagalur	43155
12	Chitradurga	59164
13	D. Kannada	6878
14	Davanagere	110169
15	Dharwad	101526
16	Gadag	54720
17	Gulbarga	224558
18	Hassan	66167
19	Haveri	81174
20	Kodagu	12338
21	Kolar	83576
22	Koppal	92912
23	Mandya	89070
24	Mysore	117390
25	Raichur	116220
26	Ramanagar	34011
27	Shimoga	63151
28	Tumkur	86193
29	Udupi	6188
30	Uttara Kannada	35633
	GRAND TOTAL	**2319259**

ಶ್ರೀ ಮಹದೇವ ಪ್ರಸಾದ ಹೆಚ್.ಎಸ್: ಮಾನ್ಯ ಅಧ್ಯಕ್ಷರೆ, ನಾನು ಕೇಳಿರುವ ಮೂರು ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದ್ದಾರೆ. ಮೊದಲನೆಯ ಪ್ರಶ್ನೆಗೆ ಎಷ್ಟು ಎಪಿಎಲ್, ಬಿಪಿಎಲ್ ಕಾರ್ಡು ಇದೆ ಎನ್ನುವುದರ ಬಗ್ಗೆ ಉತ್ತರ ಕೊಟ್ಟಿದ್ದಾರೆ, ಮತ್ತು ತಾಲ್ಲೂಕುವಾರು ಅನುಬಂಧದಲ್ಲಿ ವಿವರ ಕೊಟ್ಟಿದ್ದಾರೆ. ಎರಡನೆಯ ಪ್ರಶ್ನೆಗೆ ಬಿಪಿಎಲ್ ಕುಟುಂಬಗಳ ಪೈಕಿ ಎಷ್ಟು ಕುಟುಂಬಕ್ಕೆ ಗಣಕೀಕೃತ ಶಾಶ್ವತ ಪಡಿತರ ಚೀಟಿ ನೀಡಲಾಗಿದೆ ಎಂದು ಪ್ರಶ್ನೆಯನ್ನು ಕೇಳಿರುತ್ತೇನೆ. ಅದಕ್ಕೆ ಸ್ಪಷ್ಟವಾದ ಉತ್ತರವನ್ನು ಮಾನ್ಯ ಸಚಿವರು ನೀಡಿರುವುದಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟವಾದಂತಹ ಉತ್ತರವನ್ನು ನೀಡಿಲ್ಲ. Computerized card ಕೊಡುವುದು ಇನ್ನು ಎಷ್ಟು ಜನಕ್ಕೆ ಪೆಂಡಿಂಗ್ ಇದೆ ಎಂಬುದರ ಬಗ್ಗೆ ಕೇಳಿದ್ದೆ, ಅದರ ಬಗ್ಗೆಯು ಕೂಡ ಸ್ಪಷ್ಟವಾದಂತಹ ಉತ್ತರವನ್ನು ಕೊಟ್ಟಿಲ್ಲ. 3ನೆಯ ಪ್ರಶ್ನೆ ಅನೇಕ ಜನ ಬಿಪಿಎಲ್ ಫಲಾನುಭವಿಗಳು ಎಪಿಎಲ್ ಕಾರ್ಡ್ ಬಂದಿದ್ದವರಿಗೆ ಅವರು ಮತ್ತೆ ಬಿಪಿಎಲ್ ಕಾರ್ಡು ಬೇಕೆಂದು ಹೇಳಿ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಈ ರೀತಿಯಾದ ಬೇಡಿಕೆಗಳು ಎಷ್ಟು ಎಂದು ಕೇಳಿದ್ದೇವೆ. ಅದರ ಬಗ್ಗೆಯೂ ಕೂಡ ಇವರು ಪರಿಶೀಲನೆಯಲ್ಲಿದೆ ಇದರ ಬಗ್ಗೆ ಸ್ಪಷ್ಟವಾದಂತಹ ಮಾಹಿತಿ ಇಲ್ಲ. ತಾಲ್ಲೂಕುವಾರು ಮಾಹಿತಿ ನಮಗೆ ಸಿಗುತ್ತಿಲ್ಲವೆಂದು ಹೇಳಿದ್ದಾರೆ. ಇವರ ಉತ್ತರದಲ್ಲಿ 2 ಮತ್ತು 3ನೆಯ ಪ್ರಶ್ನೆಗಳಿಗೆ ಸಮರ್ಪಕವಾಗಿ ಉತ್ತರವನ್ನು ಕೊಟ್ಟಿಲ್ಲದಿರುವುದನ್ನು ಗಮನಿಸಿದರೆ ಪಡಿತರ ಚೀಟಿಯನ್ನು ವಿತರಣೆ ಮಾಡುವಂತಹ ವಿಷಯದಲ್ಲಿ ಇನ್ನು ಸ್ಪಷ್ಟತೆ ಸರ್ಕಾರಕ್ಕೆ ಇಲ್ಲವೆಂದು ನಾನು ಹೇಳಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆಂದು ನಾನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಲ್.ಎನ್. ನರೇಂದ್ರಬಾಬು: ಮಾನ್ಯ ಸಭಾಧ್ಯಕ್ಷರೆ, ಬಿಪಿಎಲ್ ಕಾರ್ಡ್ ಬಗ್ಗೆ ಮತ್ತು ಪಡಿತರ ಚೀಟಿ ವಿತರಣೆಯ ಬಗ್ಗೆ ದಯಮಾಡಿ ಅರ್ಧಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನಾವೂ ಅದರ ಬಗ್ಗೆ ಮಾತನಾಡಬೇಕಾಗಿದೆ.

ಅಧ್ಯಕ್ಷರು: ಇದನ್ನು ನಾನು convert ಮಾಡುತ್ತೇನೆ. ಈ ಪ್ರಶ್ನೆಯನ್ನು convert ಮಾಡಲೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇದನ್ನು convert ಮಾಡುವುದು ಒಳ್ಳೆಯದು. ಇಲ್ಲಿ ಎಲ್ಲರದು ಸಮಸ್ಯೆಗಳು ಇದೆ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಎಲ್ಲಾ ಕಡೆಗಳಲ್ಲೂ ಸಮಸ್ಯೆಗಳು ಇದೆ.

ಶ್ರೀ ಎನ್.ಎಲ್. ನರೇಂದ್ರಬಾಬು: ಅಕ್ಕಿ ಸಂತೆ ಎಂದು ಹೇಳಿದರು ಅದೂ ಇಲ್ಲ. ಗೋಧಿ ಮೇಳ ಅಂದರು ಅದೂ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಇದೇ question ಹಿಂದೆ ಇಲ್ಲಿ ಚರ್ಚೆಗೆ ಬಂದಿತ್ತು. ಹರತಾಳು ಹಾಲಪ್ಪನವರು ಇಲ್ಲಿ ಮಿನಿಸ್ಟರ್ ಆಗಿದ್ದಾಗ ನಾಲ್ಕು ಕಡೆ ನಾಲ್ಕು ತಾಲ್ಲೂಕುಗಳಲ್ಲಿ ಅದನ್ನು ಕನಕಪುರವು ಸೇರಿ pilot project ಆಗಿ ಒಂದು ಕಡೆಯಲ್ಲಿ ಸರ್ವೇ ಮಾಡಿಸುತ್ತೇವೆಂದು ಹೇಳಿ ಇಲ್ಲಿ assurance ಕೊಟ್ಟರು. ಅದಾದ ಮೇಲೆ ಮಾನ್ಯ ಅಶೋಕ್‌ರವರು ಬಂದರು, ಅವರು ಮಾಡಿದರು, ಇವರು ಮಾಡಲಿಲ್ಲ, ಅವರು ಸಹ ಮಾಡಲಿಲ್ಲ. ಮೇಡಂರವರಿಗೆ ಈ ಬಗ್ಗೆ ಗೊತ್ತಿಲ್ಲವೆಂದು ಕಾಣಿಸುತ್ತದೆ. ಅದಕ್ಕಾಗಿ ದಯವಿಟ್ಟು ಇವತ್ತು ನಾಳೆಯೋ ಈ ಬಗ್ಗೆ ಚರ್ಚೆ ಮಾಡುವುದಕ್ಕೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಇದನ್ನು ಅರ್ಧಗಂಟೆ ಕಾಲ ಚರ್ಚೆ ಮಾಡುವುದಕ್ಕೆ ತೆಗೆದುಕೊಳ್ಳುತ್ತೇನೆ.

ಶ್ರೀ ಡಿ.ಕೆ. ಶಿವಕುಮಾರ್: ಚರ್ಚೆ ಒಂದೇ ಅಲ್ಲ, ಚರ್ಚೆ ಮಾಡಿ....

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಈ ಬಗ್ಗೆ ಅರ್ಧಗಂಟೆಗಳ ಕಾಲ ಚರ್ಚೆ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಆಗುತ್ತದೆ. ನಾನು priority basis ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್: ಇವರು ಹಿಂದುಳಿದ ತಾಲ್ಲೂಕುಗಳಿಗೆ ಹೋಗಿ ಅಲ್ಲಿ election ನಲ್ಲಿ ವೋಟನ್ನು ಹಾಕಿಸಿಕೊಂಡು ಚುನಾವಣೆಯಲ್ಲಿ ಗೆದ್ದು ಅದು ಆದ ಮೇಲೆ ಪಡಿತರವನ್ನು ಕೊಡುವುದನ್ನು ಇದ್ದಕ್ಕಿದ್ದ ಹಾಗೆ ನಿಲ್ಲಿಸಿಬಿಟ್ಟರಲ್ಲಾ? ಮಾನ್ಯ ಅಧ್ಯಕ್ಷರೆ, ನಿಮ್ಮ ಕ್ಷೇತ್ರದಲ್ಲಿಯೂ ಆಗಿದೆ.

ಶ್ರೀ ಗೋಪಾಲ ಭಂಡಾರಿ: ಪಡಿತರ ಚೀಟಿಯನ್ನು ಕೊಡುವವರು ಇಲ್ಲ. ಇಷ್ಟೊಂದು ಕಿತ್ತುಕೊಂಡು ಹೋಗಿಬಿಟ್ಟಿದೆ.

ಅಧ್ಯಕ್ಷರು: ಆಯಿತು. ಈ ಬಗ್ಗೆ ಉತ್ತರವನ್ನು ಕೊಡಲಿ.

ಶ್ರೀ ಡಿ.ಕೆ. ಶಿವಕುಮಾರ್: ಎಲೆಕ್ಷನ್‌ಗೆ ಮುಂಚಿತವಾಗಿ ಒಂದು ಚೀಟಿಯನ್ನು ಕೊಟ್ಟುಬಿಟ್ಟರು. ಅಕ್ಕಿಯನ್ನು ಕೊಟ್ಟುಬಿಟ್ಟರು ಎಲೆಕ್ಷನ್ ಆದ ನಂತರ ತಿಂಗಳಲ್ಲಿಯೇ ಪಡಿತರವನ್ನು ಕೊಡುವುದನ್ನು ಈ ಸರ್ಕಾರ ನಿಲ್ಲಿಸಿಬಿಟ್ಟರು. ಇವರಿಗೆ ಇನ್ನು ಮುಂದಕ್ಕೆ Central Governmentನಿಂದ ಹಣವು ಬರುತ್ತದೆ. ದಯವಿಟ್ಟು ಇದನ್ನು convert ಮಾಡಿ ಇದಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಏನಾದರೊಂದು ಪರಿಹಾರವನ್ನು ಕೊಡಬೇಕು.

ಅಧ್ಯಕ್ಷರು: ಈ ಪ್ರಶ್ನೆಯನ್ನು ಅರ್ಧಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಬದಲಾಯಿಸಿ ಅವಕಾಶ ಮಾಡಿಕೊಡುತ್ತೇನೆ. ಈ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಹೆಚ್.ಎನ್. ಮಹದೇವಪ್ರಸಾದ್: ಇಲ್ಲಾ ಅಧ್ಯಕ್ಷರೆ,....

ಅಧ್ಯಕ್ಷರು: ಈಗ ಚರ್ಚೆ ಮಾಡೋಣವೆಂದು ಹೇಳಿದ್ದೇನೆ. ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡುತ್ತೇನಲ್ಲಾ ಆಗ ಕೇಳಿ

ಕು॥ ಶೋಭಾ ಕರಂದ್ಲಾಜೆ: ಮಾನ್ಯ ಸದಸ್ಯರು ಕೇಳಿದ ಮೊದಲನೆಯ ಪ್ರಶ್ನೆಗೆ ನಾನು ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು: ಈಗ ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಬೇಕೆಂದು ಕೇಳಿದರು. ಆಗ ಚರ್ಚೆಯನ್ನು ಮಾಡಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಚರ್ಚೆಗೆ ಅವಕಾಶ ಕೊಡಿ. ಚರ್ಚೆ ನಮಗೆ ಸಮಾಧಾನವಾಗದಿದ್ದರೆ ಆಗ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನಾನು ಇನ್ನು ಉಪ ಪ್ರಶ್ನೆಗಳು ಕೇಳುವುದು ಬಹಳ ಇದೆ.

ಅಧ್ಯಕ್ಷರು: ನಾನು ಈಗಾಗಲೇ convert ಮಾಡಿ ಆಗಿದೆ. ಮತ್ತೆ ಆ ಬಗ್ಗೆ ಕೇಳಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ನೀವು ಬೇರೆ ಕೇಳಿದವರಿಗೆಲ್ಲ ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುತ್ತೇನೆಂದು ಹೇಳುತ್ತೀರಿ. ಇದು ಹೇಗೆ?

ಅಧ್ಯಕ್ಷರು: ಈ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರೇ ಸಲಹೆಯನ್ನು ಕೊಟ್ಟಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ್ದಕ್ಕೆ ನಾನು convert ಮಾಡಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಇಲ್ಲಾ ನನಗೆ ಈ ಬಗ್ಗೆ ಸ್ಪಷ್ಟವಾದಂತಹ ಉತ್ತರವು ಬೇಕಾಗಿದೆ. ಇದರಲ್ಲಿ ನಾನು ಕೇಳುವುದಿದೆ.

ಶ್ರೀ ಹೆಚ್.ಸಿ. ಮಹದೇವಪ್ಪ: convert ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಿ. ಆದರೆ ಅವರಿಗೆ specific questionಗೆ reply ತೆಗೆದುಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಿ.

ಅಧ್ಯಕ್ಷರು: ಇದನ್ನು ಅರ್ಧಗಂಟೆಗಳ ಕಾಲ ಚರ್ಚೆ ಮಾಡುವ ಬಗ್ಗೆ convert ಮಾಡಿ ಆಗಿದೆ. ಮತ್ತೆ ಈ ಬಗ್ಗೆ ಕೇಳುವುದಕ್ಕೆ ಅವಕಾಶವಿಲ್ಲ.

ಶ್ರೀ ಹೆಚ್.ಸಿ. ಮಹದೇವಪ್ಪ: ಅವರಿಗೆ specific questionಗೆ reply ಕೊಡಿ ಸಾರ್. ಇದು ರಾಜ್ಯದ ಸಮಸ್ಯೆ, ಈ ಬಗ್ಗೆ ಚರ್ಚೆಯಾಗಬೇಕು. ಅವರು specific question ಏನು ಕೇಳಿದ್ದಾರೆ, ಅದಕ್ಕೆ please give specific answer to the question.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್: ಮಾನ್ಯ ಸಚಿವರು ಉತ್ತರವನ್ನು ಕೊಡುವುದಕ್ಕೆ ಸಮರ್ಥರಿದ್ದಾರೆ. ಅವರು ಉತ್ತರವನ್ನು ಕೊಡುತ್ತಿದ್ದಾರೆ.

ಅಧ್ಯಕ್ಷರು: ಒಂದು ಸಲ ಅರ್ಧ ಗಂಟೆಗಳ ಕಾಲ ಚರ್ಚೆ ತೆಗೆದುಕೊಳ್ಳುವ ಬಗ್ಗೆ convert ಆದ ಮೇಲೆ ಮತ್ತೆ ಕೇಳುವುದು ಎಂದರೆ ಹೇಗೆ?

ಶ್ರೀ ಹೆಚ್.ಸಿ. ಮಹದೇವಪ್ರಸಾದ್: ಅರ್ಧ ಗಂಟೆಗಳ ಕಾಲ ಚರ್ಚೆ ಮಾಡುವುದು ಆಗಲಿ.

ಅಧ್ಯಕ್ಷರು: ಇದನ್ನು ನಾಳೆಯೇ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಈ ಬಗ್ಗೆ ದಿನವನ್ನು ನಿಗದಿ ಮಾಡಿಬಿಡಿ.

ಅಧ್ಯಕ್ಷರು: ನಾಳೆಯೇ ತೆಗೆದುಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ: ನಾಳೆಯೇ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು: ಆಯಿತು.

ಶ್ರೀ ಕಿಮ್ಮನೆ ರತ್ನಾಕರ್: ಮಾನ್ಯ ಅಧ್ಯಕ್ಷರೆ, ನಾನು ಪತ್ರವನ್ನು ಕೊಟ್ಟಿದ್ದೇನೆ.

ಅಧ್ಯಕ್ಷರು: ನೀವು ನನಗೆ ಪತ್ರವನ್ನು ಕೊಟ್ಟಿಲ್ಲ. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

1(ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎ. ರಾಮದಾಸ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 03.03.2011ರ 4ನೇ ಪಟ್ಟಿಯಿಂದ ಲಿಖಿತ ಮೂಲಕ